## ಅಧ್ಯಾಯ ನಾಲ್ಕು – ಹತ್ಯೆಗಳ ಬಗ್ಗೆ [ಮುಂದುವರಿಕೆ]

"ಪಕ್ಷ ಯಾವಾಗಲೂ ತಾನು ಕೈಗೊಂಡ ಕಾರ್ಯಗಳ ಬಗ್ಗೆ ಹೇಳಿಕೊಳ್ಳುತ್ತೆ. ಕೆಲವೊಮ್ಮೆ ಆ ಘಟನೆಗಳಿಂದ ನಮಗೆ ಕೆಟ್ಟದಾಗಿದ್ದರೂ ಕೂಡ. ಇದರ ಕಾರಣದಿಂದಲೇ ನಿಮ್ಮಂಥವರು ನಮ್ಮನ್ನು ಟೀಕಿಸುತ್ತಾರೆ. ಆದರೆ ನಾವು ಆ ಟೀಕೆಯನ್ನು ಸಕರಾತ್ಮಕವಾಗಿಯೇ ಪರಿಗಣಿಸುತ್ತೇವೆ. ವನವಾಸಿ ಚೇತನಾ ಆಶ್ರಮದ ಹಿಮಾಂಶುಜೀಗೆ ಆಗಿದ್ದಾದರೂ ಏನು? ಇಷ್ಟೆಲ್ಲಾ ವರ್ಷಗಳು ನಾವವರಿಗೆ ತೊಂದರೆ ಕೊಡುತ್ತಿದ್ದೇವೆಂದು ಆರೋಪಿಸಿದರು. ಈಗ ಸರಕಾರ ಅವರ ಆಶ್ರಮವನ್ನು ಧ್ವಂಸಗೊಳಿಸಿದೆ. ನಾವು ತಪ್ಪು ಮಾಡಿದಾಗ ಕ್ಷಮೆ ಕೇಳುತ್ತೇವೆ. ಆದರೆ ನಾವು ಮಾಡಿರದ ತಪ್ಪನ್ನು ನಮ್ಮ ಮೇಲೆ ಹೊರಿಸಿದಾಗ ಏನು ಮಾಡಬೇಕು. ನಾವೀಗ ರಕ್ಷಣಾತ್ಮಕ ಸ್ಥಿತಿಯಲ್ಲಿದ್ದೇವೆ ಮತ್ತು ನಾವು ಯಾವುದಾದರೂ ಕಾರ್ಯ ಕೈಗೊಂಡಾಗ ಅದು ಕೇವಲ ಮಿಲಿಟರಿ ವಿಚಾರವಾಗಿರದೆ ಜಿ.ಎಸ್ ಹೇಳಿದಂತೆ ರಾಜಕೀಯ ಮತ್ತು ಸಂಘಟನಾತ್ಮಕವಾಗಿ ಒಂದು ಹೆಜ್ಜೆ ಮುಂದಿಡುವುದೇ ಆಗಿರುತ್ತದೆ. ಪ್ರತಿ ಕಾರ್ಯವನ್ನು ಯೋಚಿಸಿಯೇ ಮಾಡಿರುತ್ತೇವೆ".

ತಲೆಕಡಿದು ಹಾಕಿದ ಸಂಗತಿಗಳು ಅಥವಾ ಟ್ರೈನುಗಳಲ್ಲಿ ಡಿಟೋನೇಟರ್ ಇಟ್ಟಿದ್ದು? ಅವನ್ನೂ ಯೋಚಿಸಿಯೇ ಮಾಡಿದ್ದಾ? ಅದು ಒಳ್ಳೆಯದಾಗಲಿಲ್ಲ, ಅವನು ಹೇಳಿದ. ಮತ್ತು ಪಕ್ಷ ಅದನ್ನು ತಪ್ಪೆಂದು ಒಪ್ಪಿಕೊಂಡಿದೆ. ಪ್ರತಿ ಬಾರಿ ತಪ್ಪು ಮಾಡಿದಾಗ ಕ್ಷಮೆ ಯಾಚಿಸಿಬಿಟ್ಟರೆ ಚಳುವಳಿಯ ಮುನ್ನಡೆಗೆ ಹೇಗೆ ಸಹಾಯವಾಗುತ್ತೆ? ಇದು ಅಶಿಸ್ತಿನ ಸಂಗತಿಯಲ್ಲವಾ? ನೋಡಿ , ಆತ ಉತ್ತರಿಸಿದ, ನನಗೆ ಡಿಕೆಯ ಬಗ್ಗೆ ಗೊತ್ತು; ಹೊರಗಿನ ಸಂಗತಿಗಳ ಬಗ್ಗೆ ನಾನು ಮಾತನಾಡಲಾರೆ.

ಸಿ.ಪಿ.ಐ [ಎಂ] ಪಕ್ಷದ ಕಾರ್ಯಕರ್ತರ ಹತ್ಯೆಗಳ ಬಗ್ಗೆ ಪ್ರಶ್ನಿಸಿದೆ. ಅವರನ್ನು ಕೊಲ್ಲುವ ಅವಶ್ಯಕತೆಯಿತ್ತಾ? ಅವರು ಭ್ರಷ್ಟರಾ ಅಥವಾ ದಬ್ಬಾಳಿಕೆ ಮಾಡುವ ಜನರಾ? ಜನರ ಒತ್ತಾಯದ ಮೇರೆಗೆ ಪಕ್ಷ ಸೇಡು ತೀರಿಸಿಕೊಂಡಿದ್ದರೆ, ಈ ಕೊಲೆಗಳಿಂದ ಪಕ್ಷಕ್ಕೆ ಹಾನಿಯಾಗುತ್ತೆ ಜೊತೆಗೆ ಗೆಳೆಯರನ್ನು ಸಂಪಾದಿಸಲಾಗುವುದಿಲ್ಲ ಎಂದು ಜನರಿಗೆ ಮನವರಿಕೆ ಮಾಡಲಿಲ್ಲವಾ? ನಗರದ ಮಧ್ಯಮ ವರ್ಗಗಳು ಈ ಕೊಲೆಗೆ ಸಂತಾಪ ವ್ಯಕ್ತಪಡಿಸಿದರೆ ಅದು ತಪ್ಪೇ? ಅವರನ್ನು ಕ್ರಾಂತಿಯ ಪರವಾಗಿ ಸೆಳೆಯುವುದು ಹೇಗೆ? ಕ್ರಾಂತಿಯ ಸೈನಿಕರು ಶಿಸ್ತನ್ನು ಪಾಲಿಸದೆ ಸೇಡಿನ ಹತ್ಯೆಗಳಲ್ಲಿ ಭಾಗಿಯಾದರೆ ಪಕ್ಷ ಜನರ ಬೆಂಬಲ ಪಡೆಯುವುದಾದರೂ ಹೇಗೆ? ನಾ ಹೇಳಿದ್ದನ್ನೆಲ್ಲಾ ಕೇಳಿದ ಮೇಲೆ ನಿರರ್ಥಕ ಹಿಂಸೆಯಲ್ಲಿ ನಮಗೆ ನಂಬುಗೆಯಿಲ್ಲ ಎಂದು ತಲೆ ಕೆಡವಿದರು. ನನ್ನ ಪ್ರಶ್ನೆ ಕೇಳಿದ ಹಿರಿಯ ನಾಯಕ ' ರಾಜ್ಯ ಕಮಿಟಿಯ ವರದಿ ನೋಡದೆ ನಾನು ಉತ್ತರಿಸಲಾರೆ' ಎಂದ. ವಾಸ್ತವದಂಶಗಳನ್ನು ಪರಿಶೀಲಿಸದೆ ಉತ್ತರಿಸಲು ನಿರಾಕರಿಸಿದ್ದು ಒಳ್ಳೆಯದೆ. ನನ್ನ ಗ್ರಹಿಕೆಗೆ ಬಂದಂತೆ ನನ್ನ ಟೀಕೆಗಳನ್ನು ಆತ ತಳ್ಳಿ ಹಾಕಲಿಲ್ಲ. ಆ ಹಿರಿಯ ನಾಯಕನಿಗೆ 'ಪಕ್ಷದಲ್ಲಿ ಶಿಸ್ತು ಪಾಲಿಸುವುದು ಕಷ್ಟವಾದರೆ, ಜನರ ಯುದ್ಧ ನಡೆಸುವ ಬಗ್ಗೆ ಮತ್ತೊಮ್ಮೆ ಯೋಚಿಸಬೇಕಲ್ಲವೇ?' ಎಂದಾಗ ' ಇದು ನಿಮ್ಮ ಅಭಿಪ್ರಾಯವೋ ಅಥವಾ ಬೇರೆಯವರದಾ?' ಎಂದು ವಿಚಾರಿಸಿದ. ' ಬೇರೆಯವರ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದೇನೆ' ಎಂದಾಗ ತಲೆಯಾಡಿಸಿದ.

ನನಗೆ ಇನ್ನೂ ಅಚ್ಚರಿಯೆಂದರೆ ಯಾವಾಗ , ಎಲ್ಲಿ ಮತ್ತು ಹೇಗೆ ದಾಳಿ ಮಾಡಬೇಕೆಂಬುದನ್ನು ಪಕ್ಷದ ಯಾವ ಸ್ಥರದಲ್ಲಿ ನಿರ್ಧರಿಸುತ್ತಾರೆಂದು? ಪಕ್ಷ ನಿರ್ಧರಿಸುತ್ತಾ? ಅಥವಾ ದಳವಾ? ಪಕ್ಷದ ಅನುಮತಿಯಿಲ್ಲದೇ ದಳವೊಂದು ದಾಳಿ ನಡೆಸಿದರೆ ಕೊಡುವ ಶಿಕ್ಷೆಯಾದರೂ ಏನು? ಉದಾಹರಣೆಗೆ ಫೆ. 17 2010ರ ಜಮುಯಿ ಹತ್ಯಾಕಾಂಡಕ್ಕೆ ಒಪ್ಪಿಗೆ ಕೊಟ್ಟಿದ್ದ್ಯಾರು? ಅಥವಾ ನವೆಂಬರ್ 27 2009ರಂದು ಟಾಟಾ ಬಿಲ್ಲಾಪುರ್ ಪ್ಯಾಸೆಂಜರ್ ರೈಲು ಗಾಡಿಗೆ ಬಾಂಬಿಕ್ಕಿದ್ದಕ್ಕೆ? ಪಕ್ಷದ ವಿರೋಧವಿದೆಯೆಂದಾದರೆ ಲಾಲಗಢದ ಹತ್ಯೆಗಳನ್ಯಾಕೆ ತಡೆಯಲಿಲ್ಲ. ನನ್ನೆಲ್ಲಾ ಪ್ರಶ್ನೆಗಳನ್ನು ಸಾವಧಾನದಿಂದ ಕೇಳಿದರೂ ಪ್ರತಿಕಿಯಿಸಲಿಲ್ಲ. ನಿಮ್ಮ ಟೀಕೆಯನ್ನು ಪರಿಗಣಿಸುತ್ತೇವೆ ಎಂಬುದರ ಹೊರತಾಗಿ. ಸಾರ್ವಜನಿಕರಿಗೆ ಕೆಲವೊಮ್ಮೆ ತಿಳಿಯದಿದ್ದರೂ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ಡಿಕೆ ಮತ್ತು ಜಾರ್ಖಂಡ್‌ನ ಪರಿಸ್ಥಿತಿಗಳನ್ನು ಹೋಲಿಸಿ ಆತುರದ ನಿರ್ಧಾರವನ್ನು ತಳೆಯಬಾರದೆಂದು ಒತ್ತಾಯಿಸಿದರು. ಒಂದಷ್ಟು ಮಂದಿ ನಾನು ಬೇರೆ ಪ್ರದೇಶದ ಘಟನೆಗಳನ್ನು ಪದೇ ಪದೇ ಎಳೆದು ತಂದಿದ್ದನ್ನು ಕಂಡು ಬೇಸರಗೊಂಡರು. ನಾನು ತಪ್ಪಿರಬಹುದೆಂದು ಒಪ್ಪುತ್ತೇನೆ ಮತ್ತು ಬಿಹಾರ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಚಳುವಳಿ ಬೇರೆಯೇ ಇತಿಹಾಸ ಹೊಂದಿದ್ದರೂ ಜನರ ಮಧ್ಯೆ ಬೇರೂರಿರಬಹುದು. ಆದರೂ ಇತ್ತೀಚೆಗೆ ಕೆಲವು ತಡೆಯಬಹುದಾಗಿದ್ದ ಘಟನೆಗಳು ನಡೆದುಹೋಗಿವೆ. ಜೊತೆಗೆ ಬೇರೆಡೆಗೆ ಹೋಲಿಸಿದರೆ ಡಿಕೆಯಲ್ಲಿ ಜನಾತನ ಸರಕಾರ ಎರಡು ದಶಕಗಳಿಂದ ಜನರ ನಡುವೇ ಬೇರೂರಿದೆ. ಒಂದು ಪರ್ಯಾಯ ವ್ಯವಸ್ಥೆಯನ್ನು ಸೃಷ್ಟಿಸಿದೆ. ಜನರ ಒಪ್ಪಿಗೆಯಿಂದ

ಮೇಲುಗೈ ಸಾಧಿಸಿದ್ದಾರೆ, ಒತ್ತಾಯದಿಂದಲ್ಲ, ಇದು ಅವರ ಶಾಸನದಲ್ಲೂ ಪ್ರತಿಧ್ವನಿಸುತ್ತೆ. ಈ ವಿಚಾರದ ಮೇಲುಗೈ ಅವರ ಶಕ್ತಿಯಾಗಿದೆ. ಇಲ್ಲಿ ಒಂದು ಎಚ್ಚರಿಕೆಯ ಮಾತು ಹೇಳ ಬಯಸುತ್ತೇನೆ, ಬೇರೆ ಪ್ರದೇಶಗಳಲ್ಲೂ ಪರಿವರ್ತನೆ, ದಮನಿತರ ನಡುವೆ ಪಕ್ಷದ ಕೆಲಸದ ರೀತಿ – ವಿಚಾರವಾದದ ಮೇಲುಗೈಗೆ ಸಹಾಯಕವಾಗಿರಬಹುದು ....... ಆದರೆ ಪ್ರತಿ ವಲಯದಲ್ಲೂ ಹೋರಾಟದ ಇತಿಹಾಸ ಬೇರೆಯೇ ಆಗಿರುತ್ತೆ. ಇದು ನನ್ನ ನಂಬುಗೆಯಂತೆ ಡಿಕೆ ಮತ್ತು ಇತರ ಸ್ಥಳಗಳ ನಡುವಿನ ವ್ಯತ್ಯಾಸಕ್ಕೆ ಕಾರಣವಾಗಿರಬೇಕು. ಈ ಘಟನೆಗಳ ಬಗ್ಗೆ ನನ್ನ ಅಂತಿಮ ಅಭಿಪ್ರಾಯವನ್ನು ಬಿಹಾರ – ಜಾರ್ಖಂಡಿನ ಗೆರಿಲ್ಲಾ ವಲಯಗಳಿಗೆ ಭೇಟಿ ನೀಡುವವರೆಗೂ ಮುಂದೂಡುತ್ತೇನೆ.

ಇದೆಲ್ಲಾ ಹಾಗೆ ಇರಲಿ. ಏಪ್ರಿಲ್ 16 2009ರಂದು ಲ್ಯಾಂಡ್‌ಮೈನ್ ಸ್ಫೋಟದಿಂದ ಸತ್ತ ಕುಟುಂಬದ ಬಗ್ಗೆ ಡಿ.ಕೆ ವಿಶೇಷ ವಲಯ ಕಮಿಟಿ ಏಪ್ರಿಲ್ 28 2009ರಂದು ಹೊರಡಿಸಿದ್ದ ಸಾರ್ವಜನಿಕ ಕ್ಷಮಾಪಣಾ ಭಿತ್ತಿಯನ್ನು ಕೊಟ್ಟರು. ಅದರಲ್ಲಿ " ಕ್ಷಮೆ ಕೇಳಿದಾಕ್ಷಣ ನಿಮ್ಮನ್ನು ಅಗಲಿದ ಪ್ರೀತಿಪಾತ್ರರು ಹಿಂದಿರುಗುವುದಿಲ್ಲ. ನಿಮ್ಮ ಕಣ್ಣೀರು ತೊಡೆಯುವುದಿಲ್ಲ ಎಂಬ ಸಂಗತಿ ನಮಗೆ ತಿಳಿದಿದೆ. ಆದರೆ ಒಂದು ವಿಷಯ ಮನವರಿಕೆ ಮಾಡಿಕೊಡುತ್ತೇವೆ. ಪಕ್ಷಕ್ಕೆ ಅವರ ಮೇಲೆ ಯಾವುದೇ ದ್ವೇಷವಿರಲಿಲ್ಲ. ಅದು ಆಕಸ್ಮಿಕ ಘಟನೆ. ಸರಕಾರಿ ಸೇವಕರು, ಅರೆಸೈನಿಕ ಪಡೆಯವರು ನಮ್ಮ ಶತ್ರುಗಳಲ್ಲ... ನೀವು ಕೇಳಬಹುದು ಮತ್ತೆ ಅವರ ಮೇಲ್ಯಾಕೆ ದಾಳಿ ಮಾಡುತ್ತೀರೆಂದು? ವಾಸ್ತವದಲ್ಲಿ ಇದೆಲ್ಲಾ ವ್ಯವಸ್ಥೆಯಿಂದ ಆಗುತ್ತಿರುವ ಪರಿಣಾಮ. ನಿಮಗೆ ಚೆನ್ನಾಗಿ ಗೊತ್ತಿದೆ, ಪ್ರತಿ ಶಾಂತಿಯುತ ಹೋರಾಟಕ್ಕೆ ಲಾಠಿ ಮತ್ತು ಗುಂಡಿನಿಂದ ಉತ್ತರಿಸುತ್ತಾರೆ. ನಾವು ತೀವ್ರಗಾಮಿಗಳಲ್ಲ, ಉಗ್ರಗಾಮಿಗಳಲ್ಲ. ನಾವು ಕೆಲಸಗಾರರ , ರೈತರ, ಮಧ್ಯಮ ವರ್ಗದವರ ಮಕ್ಕಳು.. ಹಿಂದುಳಿದ ಆದಿವಾಸಿ ಪ್ರದೇಶದ ಜನರನ್ನು ಅವರ ಮೇಲಾಗುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಯನ್ನು ವಿರೋಧಿಸಲು ಸಂಘಟಿಸುತ್ತಿದ್ದೇವೆ."

ಮುಂದೆ ಆ ಭಿತ್ತಿಪತ್ರ "ದಕ್ಷಿಣ ಬಸ್ತಾರಿನ ಸಿಂಗಾರಾಮ್‌ನಲ್ಲಿ ಜನವರಿ 4 2009 ರಂದು ಕೊಲೆಗೀಡಾದ ಹತ್ತೊಂಬತ್ತು ಆದಿವಾಸಿಗಳ ಬಗ್ಗೆ ತಿಳಿಸುತ್ತೆ. ಅವರಲ್ಲಿ ನಾಲ್ವರು ಮಹಿಳೆಯರನ್ನು ಅತ್ಯಾಚಾರ ಮಾಡಿ ಕೊಲೆಮಾಡಿರುತ್ತಾರೆ. ಪಶ್ಚಿಮ ಬಸ್ತಾರಿನ ಮಿಂಕಾಪಲ್ಲಿಯಲ್ಲಿ ಆರು ಆದಿವಾಸಿಗಳ ಕೊಲೆ. 2005ರಿಂದ ಕನಿಷ್ಠ ಸಾವಿರ ಆದಿವಾಸಿಗಳ ಹತ್ಯೆ, ನೂರಾರು ಮಹಿಳೆಯರ ಅತ್ಯಾಚಾರ, 700 ಹಳ್ಳಿಗಳನ್ನು ಸುಟ್ಟುಹಾಕಲಾಗಿದೆ. ಇವೆಲ್ಲವನ್ನೂ ಡಿಕೆ ಕಾಡುಗಳ ಗಣಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪೆನಿಳು ಮತ್ತು ವಿದೇಶಿ ಬಂಡವಾಳಶಾಹಿಗಳ ಕೈಗೆ ಹಸ್ತಾಂತರಿಸಲು ನಡೆಸುತ್ತಿರುವ ಸಂಚು. ಈ ಹಿಂಸೆಗೆ ಉತ್ತರವಾಗಿ 'ಹಿಂಸೆ'ಯನ್ನೇ ಉಪಯೋಗಿಸಬೇಕಾದ ಅನಿವಾರ್ಯತೆಯಿದೆ ನಮಗೆ. ನಾವು ಪ್ರತಿರೋಧ ತೋರದೇ ಇದ್ದಿದ್ದರೆ ಶತ್ರುಗಳು ತಮ್ಮ ಉದ್ದಿಶ್ಯದಲ್ಲಿ ಸಫಲರಾಗುತ್ತಿದ್ದರು. ಪೋಲಿಸ್ ಮತ್ತು ಅರೆಸೈನಿಕ ಪಡೆಗಳಲ್ಲಿ ಕೆಲಸ ಮಾಡುತ್ತಿರುವವರು ಸಾಮಾನ್ಯ ರೈತ ಅಥವಾ ಕೆಲಸಗಾರರ ಕುಟುಂಬಗಳಿಂದಲೇ ಬಂದಿರುವವರು. ಆದರವರು ಶೋಷಕರ ಕೈಗೊಂಬೆಗಳಾಗಿದ್ದಾರೆ ಮತ್ತು ಯಾರ ನಡುವಿನಿಂದ ಬೆಳೆದು ಬಂದಿದ್ದಾರೋ ಅವರ ಮೇಲೆಯೇ ದಾಳಿ ನಡೆಸುತ್ತಿದ್ದಾರೆ. ಕೊಲೆ, ಸುಲಿಗೆ, ಅತ್ಯಾಚಾರ, ಲಂಚ, ಬಂಧನ ..... ಇದು ಪೋಲಿಸರ ಸಾಮಾನ್ಯ ನಡೆಯಾಗಿಬಿಟ್ಟಿದೆ........ಬಹಳಷ್ಟು ಬಾರಿ ಅವರಿಗೆ ಬಡ ಮತ್ತು ಶೋಷಿತ ಜನರ ಮೇಲೆ ದಾಳಿ ನಡೆಸಬೇಡಿ ಎಂದು ಮನವಿ ಮಾಡಿದ್ದೇವೆ. ಪೋಲಿಸರ ಮತ್ತು ಸೈನಿಕ ಪಡೆಗಳ ಮೇಲೆ ದಾಳಿ ನಡೆಸಲು ಇದೇ ಹಿನ್ನೆಲೆ"

"ನಾವೇಳಿರಲಿಲ್ವಾ" ಅಂತನ್ನೋ ಕಟುಟೀಕಾಕಾರರು ಅಥವಾ " ವರ್ಗ ಹೋರಾಟದಲ್ಲಿ ಇದೆಲ್ಲಾ ಮಾಮೂಲು" ಎಂದ್ಹೇಳಿಬಿಡೋ ಕಟು ಸಮರ್ಥಕರ ವಾದ ಸರಣಿಗಿಂತ ದಿನಾ ಜನರ ನಡುವೆಯೇ ಇದ್ದು ಹೋರಾಡುತ್ತಿರುವವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾರೆ. ನನ್ನ ಕೆಲವು ತೀಕ್ಷ್ಣ ಪ್ರಶ್ನೆಗಳನ್ನೂ ಕೂಡ ಅವರು ಸುಮ್ಮನೆ ತಿರಸ್ಕಾರ ಭಾವದಿಂದ ನೋಡಲಿಲ್ಲ. ಹೊರಗಿನ ವಲಯಗಳ ಬಗ್ಗೆ ಉತ್ತರಿಸಲು ಹಿಂಜರಿದರೂ ಡಿ.ಕೆ ಯ ಬಗೆಗಿನ ಪ್ರಶ್ನೆಗಳಿಗೆ ಅವರೇ ಮುಂದಾಗಿ ಉತ್ತರವನ್ನೀಯುತ್ತಿದ್ದರು. ರಾಜಕೀಯ ಇಲ್ಲಿ ಮೇಲುಗೈ ಸಾಧಿಸಿದೆ. ಸಾವಿರದ ಸಂಖ್ಯೆಯಲ್ಲಿ ಭಿತ್ತಿಪತ್ರಗಳನ್ನು ಪ್ರಕಟಿಸಿ ಹಂಚಿ ಕ್ಷಮೆ ಕೇಳುವುದು ಸರಿಯಾದ ಹೆಜ್ಜೆಯಾಗಿದೆ. ಅವರಿಗೆ ಗೊತ್ತು ಪ್ರತಿಯೊಂದಕ್ಕೂ ಜನರಿಗೆ ಉತ್ತರಿಸಬೇಕಾಗುತ್ತೆ ಮತ್ತು ಜನರು ಇವರನ್ನು ಗಂಭೀರವಾಗಿ ಪರಿಗಣಿಸಬೇಕೆಂದರೆ ಜವಾಬ್ದಾರಿಯುತವಾಗಿ ವರ್ತಿಸಬೇಕಾಗುತ್ತೆ ಎಂದು.

## ಅವರಿಗೆ ಯಾಕೆ ಭಯವಿಲ್ಲ?

ಭೆಟ್ಟಿಯಾದ ಪ್ರತಿಯೊಬ್ಬರಿಗೂ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಕ್ಯಾಂಪು, ಪಡೆಗಳನ್ನು ಗೆರಿಲ್ಲಾ ವಲಯದ ಸುತ್ತ ಹಾಕಿದ್ದಾರಲ್ಲಾ; ಸಂಪೂರ್ಣ ಬ್ಲಾಕ್ ಮಾಡಿದ್ದಾರಲ್ಲಾ, ನಿಮಗೆ ಭಯವಾಗುದಿಲ್ಲವಾ? ಎಂದು ಕೇಳಿದೆ [ ಅಂತರಾಷ್ಟ್ರೀಯ ಕಾನೂನಿನ ಪ್ರಕಾರ ಈ ಆರ್ಥಿಕ ತಡೆ ಯುದ್ಧದ ಪರಿಸ್ಥಿತಿಯ ಕೆಲಸ.] ಬಂದ ಒಂದು ಉತ್ತರ " ಪ್ರಜಾ ರಾಜ್ಯಕ್ಕಾಗಿ ಹೋರಾಡಲೇಬೇಕು." ಆದರೆ ಭಯ? " ನಾವು ಹೆದರಿದರೆ 'ಸರಕಾರ' ನಮ್ಮನ್ನು ಮತ್ತಷ್ಟು ಹೆದರಿಸುವ ಕೆಲಸ ಮಾಡುತ್ತೆ" ಇಷ್ಟು ಆತ್ಮವಿಶ್ವಾಸ ಎಲ್ಲಿಂದ? ಯುವ ಮಹಿಳೆ ಸುಖಮತಿಯನ್ನು ಕೇಳಿದೆ. ಆಕೆ ಭದ್ರತಾ ಪಡೆ ಎರಡು ಬದಿಯಿಂದ ಸುತ್ತುವರಿದಿದ್ದ ರಸ್ತೆಯನ್ನು ಪರಿಶೀಲಿಸಿ ಉಳಿದೆಲ್ಲರೂ ದಾಟಿದ ಮೇಲೆ ಕೊನೆಯದಾಗಿ ದಾಟಿದ್ದಳು. ರಸ್ತೆಗೆ ಮೊದಲು ತಲುಪಿ ಕೊನೆಯದಾಗಿ ನಿರ್ಗಮಿಸಬೇಕಾದ ಕಠಿಣ ಕೆಲಸವನ್ನು ಮಾಡಲು ನಿನಗೆ ಭಯವಾಗುವುದಿಲ್ಲವಾ? ಸುಖಮತಿ ನಕ್ಕು ನುಡಿದಳು " ಪೋಲೀಸರನ್ನು ನಾನು ಚಿಕ್ಕಂದಿನಿಂದ ನೋಡುತ್ತಿದ್ದೇನೆ. ಹಳ್ಳಿಗೆ ನುಗ್ಗಿ ನಮ್ಮನ್ನು ಬೆದರಿಸುತ್ತಿದ್ದ ದಿನಗಳಂದ. ನನಗೆ ಅವರ ಭಯವಿಲ್ಲ". ಆದರೆ ಅಷ್ಟು ದೊಡ್ಡ ಪಡೆಯನ್ನು ಹೇಗೆ ಎದುರಿಸುತ್ತೀರಿ? ನನ್ನ ಜೊತೆಯಲ್ಲಿದ್ದವರು ಹೇಳಿದರು "ನಮ್ಮ ಜಾಗದಲ್ಲಿ ಹೋರಾಡುತ್ತಿದ್ದೇವಾದ್ದರಿಂದ ನಮಗೆ ಸೈನ್ಯದ ಭಯವಿಲ್ಲ." ಆದರೆ ವಿಶೇಷ ಪೋಲೀಸ್ ಅಧಿಕಾರಿಗಳ ಕತೆ ಬೇರೆ. ಒಂದೇ ಸಮಾಧಾನದ ಸಂಗತಿಯೆಂದರೆ ಅವರ ಕ್ರಿಮಿನಲ್ ಕಾರ್ಯಗಳಿಂದ ಜನರು ನಮ್ಮ ಆಶ್ರಯ ಕೋರುತ್ತಾರೆ ಅಥವಾ ಮಾವೋವಾದಿಗಳಿಗೆ ಬೆಂಬಲ ಸೂಚಿಸುತ್ತಾರೆ.

ಇದರ ಬಗ್ಗೆ ಡಿ.ಕೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಸೋನುಗೆ ಕೇಳಿದಾಗ, ಅವನು ಹೇಳಿದ "2005ರಲ್ಲಿ ಸಲ್ವಾ ಜುಡುಮ್ ಆರಂಭವಾದಾಗ ಮೊದಲ ಆರು ತಿಂಗಳು ಇದೇ ಪ್ರಶ್ನೆ ಕೇಳಲಾಗಿತ್ತು. ಹಳ್ಳಿಗಳ ಮೇಲೆ ದಾಳಿ ನಡೆಸಿ, ಸುಟ್ಟು ಹಾಕಿ ಪಕ್ಷದ ಕಾರ್ಯಕರ್ತರು ಮತ್ತು ಸಹಾನುಭೂತಿ ಉಳ್ಳವರನ್ನು ಹುಡುಕಿ ಕೊಲ್ಲಲಾಗುತ್ತಿತ್ತು. ಕೆಲವರು ನಮಗೆ ಹಿಂದಿರುಗಲು ಹೇಳಿದರು. ಬಹಳಷ್ಟು ಮಂದಿ ಈ ಬಾರಿ ಸರಕಾರವೇ ಗೆಲ್ಲುತ್ತದೆಂದು ನಂಬಿದ್ದರು ಮತ್ತದನ್ನು ಪ್ರಚುರ ಪಡಿಸುತ್ತಿದ್ದರು. ಆದರೆ ಆರು ತಿಂಗಳೊಳಗೆ ಎಲ್ಲವೂ ಅದಲು ಬದಲಾಯಿತು."

## ಅದಾದದ್ದು?

ಫೆಬ್ರವರಿ 2006ರಲ್ಲಿ ಪಕ್ಷ ಸ್ಪಂದಿಸಿತು. ಜನರ ರ್‍ಯಾಲಿ ಸಂಘಟಿಸಿತು. ಮೊದಲಿಗೆ ಕಾಡಿನೊಳಗೆ ಗುಳೆಹೋಗಿದ್ದ ಜನರ ಪುನರ್ವಸತಿಗೆ ಪ್ರಾಮುಖ್ಯತೆ ಕೊಡಲಾಯಿತು. ಅವರನ್ನು ನಿರ್ವಸತಿಗರನ್ನಾಗಿ ಮಾಡಿ ಕಾಡು ಖಾಲಿ ಮಾಡಿಸಿ ಗಣಿ ಮಾಫಿಯಾಗೆ ಅವರ ಭೂಮಿಯನ್ನು ನೀಡುತ್ತಾರೆಂದು ಎಚ್ಚರಿಸಿತು. ಪಕ್ಷದ ಕಾರ್ಯಕರ್ತರು ಪಕ್ಷದ ವತಿಯಿಂದ ಅರಣ್ಯ ಇಲಾಖೆ, ಕಂಟ್ರ್ಯಾಕ್ಟರುಗಳು, ಪೋಲೀಸ್ ಮತ್ತು ತಮ್ಮದೇ ಮುಖ್ಯರ ವಿರುದ್ಧ ನಡೆಸಿದ ಹೋರಾಟಗಳನ್ನು ನೆನಪಿಸಿತು. ಬ್ರಿಟೀಷರ ವಿರುದ್ಧ ನಡೆದ ಭೂಮ್‌ಕಾಲ್ ಹೋರಾಟವನ್ನು ನೆನಪಿಸಿ ಹೋರಾಡದೆ ಇದ್ದರೆ ಇದುವರೆಗೆ ಪಡೆದಿದ್ದ ಗೆಲುವುಗಳು ವ್ಯರ್ಥವಾಗುತ್ತದೆಂದು ತಿಳಿಸಿ ಜನರ ಸೈನ್ಯ ಸೇರಿ ಸಲ್ವಾ ಜುಡುಂನ ವಿರುದ್ಧ ಹೋರಾಡಬೇಕೆಂದು ತಿಳಿಸಲಾಯಿತು. ಇದು ಸುಲಭದ ಕೆಲಸವೆಂದು ತೋರಬಹುದು. ಆದರೆ ಸಲ್ವಾ ಜುಡುಂನ ದಾಳಿಯಿಂದ ಜನರನ್ನು ರಕ್ಷಿಸಿ, ಪುನರ್ವಸತಿ ಕಲ್ಪಿಸಿ, ಅವರಲ್ಲಿ ಧೈರ್ಯ ಮತ್ತು ಭರವಸೆ ಮೂಡಿಸಲು ಬಹಳಷ್ಟು ಸಮಯ ಬೇಕಿತ್ತು. ಜೊತೆಗೆ ಪಕ್ಷವನ್ನು ಎಲ್ಲಾ ಕೊಲೆಗಳಿಗೆ ಹೊಣೆಗಾರರನ್ನಾಗಿ ಮಾಡಿ ಕೆಲವು ಚಳುವಳಿಗಾರರು ಸಲ್ವಾ ಜುಡುಂನನ್ನು ಬೆಂಬಲಿಸಿ ಇದನ್ನು ಪಕ್ಷವೇ ತಂದುಕೊಂಡದ್ದು ಎಂದು ಸಮರ್ಥಿಸಿಕೊಂಡರು. ಒಂದಂತೂ ಸತ್ಯ , ಜನರ ಬೆಂಬಲ ಪಕ್ಷಕ್ಕಿಲ್ಲದೇ ಇದ್ದರೆ ಸಲ್ವಾ ಜುಡುಂನನ್ನು ಎದುರಿಸುವುದು ಅಸಾಧ್ಯವೇ ಆಗುತ್ತಿತ್ತು.

ಜಿ.ಎಸ್ ಸಂದರ್ಶನದಲ್ಲಿ ಹೇಳಿದ್ದು ಇದನ್ನೇ " ಜನ ನಮ್ಮನ್ನು ಕರೆಯುತ್ತಿದ್ದಾರೆ. ಕಡಿಮೆ ಅನುಭವವಿರುವ, ಶಸ್ತ್ರಾಸ್ತ್ರಗಳು ಹೆಚ್ಚಾಗಿಲ್ಲದ ಕಾಮ್ರೇಡುಗಳನ್ನೂ ನಮ್ಮ ಜಾಗಕ್ಕೆ ಬನ್ನಿ ಎಂದು ಜನರು ಆಹ್ವಾನಿಸುತ್ತಿದ್ದಾರೆ. ಉದಾಹರಣೆಗೆ ಉತ್ತರ ಪ್ರದೇಶದ ಸೋನೆಭದ್ರಾದ ಜನ ತಾವಾಗಿಯೇ ನಮ್ಮನ್ನು ಆಹ್ವಾನಿಸಿದರು. ನಂತರ ರಾಯಘಡದಿಂದ ನಯಾಗಡಕ್ಕೆ operation ropewayಯ ಮೂಲಕ ವಿಸ್ತರಿಸುವ ನಯಾಗಡ ದಾಳಿಯಿಂದ ಕೇವಲ 8 –10 ತಿಂಗಳಲ್ಲಿ ಸಾಧ್ಯವಾಯಿತು. ನಯಾಗಡದ ದಾಳಿ ಮಿಲಿಟರಿಗಾಗಿಯಷ್ಟೇ ಮುಖ್ಯವಾಗಿರಲಿಲ್ಲ, ರಾಜಕೀಯ ಪ್ರಾಮುಖ್ಯತೆಯಿತ್ತು. ಆಪರೇಷನ್ ವಿಕಾಸ್ ಮೂಲಕ ಚತ್ತೀಸ್‌ಗಡದ ಮನ್‌ಪುರ್‌ಗೆ ಚಳುವಳಿ ವಿಸ್ತರಿಸಿತು. ಜನರ ವಿಶ್ವಾಸ ಉನ್ನತವಾಗಿದೆ; ಆಹ್ವಾನ ನೀಡುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ ನಾವು ಖಂಡಿತವಾಗಿ ಬೆಳೆಯುತ್ತೇವೆ

ಮತ್ತು ಗೆರಿಲ್ಲಾ ಯುದ್ಧವನ್ನು ವಿಸ್ತರಿಸುತ್ತೇವೆ. ದೂರಗಾಮಿ ಪರಿಣಾಮದಲ್ಲಿ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳು ಬದಲಾಗಲೇಬೇಕು ಮತ್ತು ಒತ್ತಡದಿಂದ ಸರಕಾರ ಕುಸಿಯುತ್ತದೆ. ಈಗ ಸರಕಾರ ಉದ್ದಿಶ್ಯಪೂರಕವಾಗಿ ಸೈನ್ಯದ ಮೇಲೆ ಖರ್ಚು ಮಾಡುತ್ತಿದೆ, ಆದರೆ ಯುದ್ಧ ಹೊಸ ಹೊಸ ಪ್ರದೇಶಗಳಿಗೆ ವಿಸ್ತರಿಸಿದಂತೆ ಸರಕಾರ ವಿಫಲವಾಗುತ್ತದೆ. ಈ ತಂತ್ರದಿಂದ ನಾವು ಯುದ್ಧ ಹೂಡಿದ್ದೇವೆ."

ಆದ್ದರಿಂದ ಸೋನು ಹೇಳಿದ್ದನ್ನು – 'ಸಲ್ವಾ ಜುಡುಂನ ಸಮಯದಲ್ಲಿ ಜನರ ಸೈನ್ಯ ಮತ್ತು ಪಿ.ಎಲ್.ಜಿ.ಎಯ ನೇಮಕಾತಿ ಹೆಚಿನ ಸಂಖ್ಯೆಯಲ್ಲಾಯಿತು' – ನಂಬಲು ಕಷ್ಟವಾಗಲಿಲ್ಲ. 1990–1991 ಮತ್ತು 97–98ರಲ್ಲಿ ಸ್ಥಳೀಯ ಶೋಷಕರು 'ಜನ ಜಾಗ್ರಣ್' ಹೆಸರಿನಲ್ಲಿ ಹಿಂಸೆ ಆರಂಭಿಸಿದಾಗಲೂ ಪಕ್ಷ ಬಲವಾಗಿ ಬೆಳೆದಿತ್ತೆಂದು ತಿಳಿಸಿದ. ಇದರರ್ಥ ಈಗ ಡಿ.ಕೆಯಲ್ಲಿ 2.5 –3 ಲಕ್ಷದಷ್ಟು ಪಡೆಗಳನ್ನು ನಿಯೋಜಿಸಿರುವಾಗ ಕೂಡ ನೀವು ಮತ್ತದೇ ಪುನರಾವರ್ತನೆ ನಿರೀಕ್ಷಿಸುತ್ತೀರಾ? ಎಂದು ಪ್ರಶ್ನಿಸಿದೆ. ಕೋಟ್ಯಾಂತರ ಮಂದಿ ಕ್ರಾಂತಿಯ ಕರೆಗೆ ಓಗೊಟ್ಟರೆ, ಕೆಲವು ಲಕ್ಷಗಳಲ್ಲಿರುವ ಶಕ್ತಿಯುತ ಪಡೆಗಳು ಲೆಕ್ಕಿಲ್ಲ. ಆದರೆ ಜನರು ಓಗೊಡುತ್ತಾರಾ? ಹಿರಿಯ ಕಾಮ್ರೇಡ್‌ಗಳು ತುಂಬಿರುವ ವಿಶ್ವಾಸ; ಸಾಮಾನ್ಯ ಕಾರ್ಯಕರ್ತರ ಪ್ರತಿಕ್ರಿಯೆ ಗಮನಿಸಿದಾಗ ಜನರು ಹೋರಾಡುತ್ತಾರೆಂಬ ನಂಬಿಕೆ ಅವರಿಗಿದೆಯೆಂದು ತಿಳಿಯುತ್ತದೆ. ಪ್ರಮುಖ ಕಾಮ್ರೇಡ್‌ಗಳ ಬಂಧನ ಮತ್ತು ಕಾರ್ಯಕರ್ತರನೇಕರ ಹತ್ಯೆಯಿಂದ ಪಕ್ಷಕ್ಕೆ ನಷ್ಟವೂ ಆಗಿದೆಯೆಂದು ಒಪ್ಪಿಕೊಳ್ಳುತ್ತಲೇ ಈ ನಂಬಿಕೆ ತಳೆದಿದ್ದಾರೆ.

ಕಾಮ್ರೇಡ್‌ಗಳ ಸಾವು, ನಷ್ಟ ಮತ್ತು ಹಿನ್ನಡೆಯನ್ನು ಹೇಗೆ ಎದುರಿಸುತ್ತಾರೆ ? ಮುಂದುವರಿಯಲು ಅವರಿಗೆ ಧೈರ್ಯ ಮತ್ತು ಆತ್ಮವಿಶ್ವಾಸ ಎಲ್ಲಿಂದ ಸಿಗುತ್ತದೆ. "ಜನರ ಪ್ರೀತಿ ಮತ್ತು ನಂಬುಗೆ" ಇದು ಸಾಮಾನ್ಯ ಉತ್ತರವಾಗಿತ್ತು. ಮಧ್ಯೆ ಮಧ್ಯೆ ಹೊರತರುವ ಕರಪತ್ರಗಳು ಇದನ್ನೇ ಪ್ರತಿಬಿಂಬಿಸುತ್ತಿದ್ದವು. ಡಿ.ಕೆ ವಿಶೇಷ ವಲಯ ಕಮಿಟಿಯಿಂದ ಜನವರಿ 25 –27, 2010ರ ಬಂದ್‌ಗೆ ಸಂಬಂಧವಾಗಿ ಹೊರತಂದಿದ್ದ ಕರಪತ್ರದಲ್ಲಿ ಪೋಲೀಸ್ ಮತ್ತು ಅರೆ ಸೈನಿಕ ಪಡೆಗೆ ಸರಕಾರ ಯಾಕೆ ಈ 'ಆಪರೇಷನ್ ಗ್ರೀನ್ ಹಂಟ್' ಪ್ರಾರಂಭಿಸಿದೆ ಎಂಬುದರ ಬಗ್ಗೆ ಯೋಚಿಸುವಂತೆ ಮನವಿ ಮಾಡಲಾಗಿತ್ತು. ಬಂಡವಾಳಶಾಯಿಗಳು ಮತ್ತು ವಿದೇಶಿ ಕಂಪೆನಿಗಳ ಪರವಾಗಿ ನೀವು ಯುದ್ಧಕ್ಕಿಳಿದಿದ್ದೀರಾ ಎಂಬುದನ್ನು ಅವರಿಗೆ ನೆನಪಿಸುತ್ತಾ " ಸಾಯಿಸಿ ಪ್ರಶಸ್ತಿ ಪಡೆಯಿರಿ. ಸಾಯಿರಿ ಪ್ರಶಸ್ತಿ ಪಡೆಯಿರಿ" ಎಂದು ನಿಮಗೆ ಹೇಳಲಾಗಿದೆ. ನಿಮ್ಮದೇ ವರ್ಗದ ಸೋದರ ಸೋದರಿಯರ ಮೇಲೆ ಬಂದೂಕು ಚಲಾಯಿಸಿದರೆ ಜನರ ದ್ವೇಷವನ್ನಷ್ಟೇ ಪಡೆಯುತ್ತೀರ. ಇನ್ನೊಂದು ಕರಪತ್ರದಲ್ಲಿ ಯುವಕರು ಮತ್ತು ಯುವತಿಯರು ಸರಕಾರಿ ಪಡೆಗಳಿಗೆ ಸೇರಬಾರದೆಂದು ಮನವಿ ಮಾಡಲಾಗಿತ್ತು. ಪಿ.ಎಲ್.ಜಿ.ಎಗೆ ಸೇರಿದರೆ ನಿಮಗೆ ಸಂಬಳ ಸಿಗದಿದ್ದರೂ ಊಟ ಬಟ್ಟೆ ಮತ್ತು ಸ್ವಂತ ಅವಶ್ಯಕತೆಗಳನ್ನು ಪೂರೈಸಲಾಗುತ್ತೆ ಮತ್ತು ನಿಮ್ಮ ಕುಟುಂಬಗಳಿಗೆ ಜನತಾನ ಸರಕಾರ ಸಹಾಯ ಮಾಡುತ್ತೆ. ಜೊತೆಗೆ ಜನರ ಪ್ರೀತಿ ಗಳಿಸುತ್ತೀರ. ಅದೇ ಸರಕಾರಿ ಪಡೆಗೆ ಸೇರಿದರೆ ನಿಮಗೆ ಸಂಬಳ, ಲೂಟಿ, ಕೊಲೆ ಮತ್ತು ಅತ್ಯಾಚಾರಗೈಯಲು ಅನುಮತಿ ಸಿಗುತ್ತೆ, ಆದರೆ ಜನರ ದ್ವೇಷ ಪಡೆಯುತ್ತೀರಿ, ನಿಮ್ಮನ್ನು ನೆನಪಿಸಿಕೊಳ್ಳಲಾಗುವುದಿಲ್ಲ. ಬದಲಿಗೆ ನಿಮ್ಮ ಸಾವನ್ನು ಸಂಭ್ರಮದಿಂದ ಆಚರಿಸಲಾಗುತ್ತೆ. ಮತ್ತೊಂದು ಕರಪತ್ರದಲ್ಲಿ ವಿದೇಶಿ ಆಕ್ರಮಣಕಾರರು ನಮ್ಮ ಮೇಲೆ ನಡೆಸಿದ ದಾಳಿಗೆ ಈ ಯುದ್ಧ ಸಮ ಎಂದು ಸರಕಾರಿ ಪಡೆಗಳ ಬಗ್ಗೆ ಹೇಳಲಾಗಿತ್ತು. ಕರಪತ್ರದ ಕೊನೆಯಲ್ಲಿ " ಸರಕಾರ ನಿಮ್ಮನ್ನು ಪ್ರಾಣಿಗಳಿಗಿಂತ ಉತ್ತಮರು ಎಂದು ಭಾವಿಸಿಲ್ಲ. ಗುಲಾಮರಿಗಿಂತ ನೀವು ಉತ್ತಮರಲ್ಲ. ಕೆಲವೊಮ್ಮೆ ನಾಯಿ [ dogs – greyhounds] ಎನ್ನುತ್ತಾರೆ, ಕೆಲವೊಮ್ಮೆ ಹಾವು[cobra] ಮತ್ತು ಕೆಲವೊಮ್ಮೆ ಬೆಕ್ಕು[black cats] ಎಂದು ಕೂಗುತ್ತಾರೆ.

ಬಲಿಷ್ಠ ಪಡೆಗಳ ವಿರುದ್ಧ ಹೋರಾಡಲು ಬೇಕಾಗಿರುವ ಈ ವಿಶ್ವಾಸ ಮತ್ತು ಶಕ್ತಿ ರಾತ್ರಿ ಕಳೆಯುವುದರೊಳಗಾಗಿ ಬಂದಿದ್ದಲ್ಲ. ಮೂವತ್ತು ವರ್ಷದ ತ್ಯಾಗ, ಕಠಿಣ ಜೀವನ ಮತ್ತು ನೂರಾರು ಯುವಕ ಯುವತಿಯರ ಸ್ವಾರ್ಥರಹಿತ ಬದುಕು ಒಂದು ಪುಟ್ಟ ಚಳುವಳಿಗೆ ಹೋರಾಟದ ರೂಪ ಕೊಟ್ಟಿದೆ. ಡಿ.ಕೆ.ಯಲ್ಲಿನ ಚಳುವಳಿಯ ಎರಡನೇ ಪೀಳಿಗೆಯವರು ಬಹುತೇಕ ಆದಿವಾಸಿಗಳಾಗಿದ್ದಾರೆ. ಎರಡನೇ ಪೀಳಿಗೆ? ಪಕ್ಷದ ಹಿರಿಯ ವ್ಯಕ್ತಿಯೊಬ್ಬ ಮೂರನೇ ಪೀಳಿಗೆ ತಯಾರಾಗುತ್ತಿರುವುದರ ಬಗ್ಗೆ ತಿಳಿಸಿದ. ಅರ್ಥವಾಗಲಿಲ್ಲ. ವಿವರಿಸುವಂತೆ ಕೇಳಿದೆ. ಕಳೆದ ವರ್ಷದಿಂದ ಪಕ್ಷ ಬೇಸಿಕ್ ಕಮ್ಯುನಿಸ್ಟ್ ಶಾಲೆಯನ್ನು ಪ್ರಾರಂಭಿಸಿದೆ. 25 –30 ಮಕ್ಕಳನ್ನು, 12–15 ವರ್ಷದವರು, ಆರಿಸಿ ಆರು ತಿಂಗಳು ತರಬೇತಿ ನೀಡಲಾಗುತ್ತೆ. ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಮಾವೋವಾದದ ಪಾಠಗಳು, ಹಿಂದಿ ಮತ್ತು ಇಂಗ್ಲೀಷ್, ಗಣಿತ, ಸಮಾಜ ವಿಜ್ಞಾನ, ಕಂಪ್ಯೂಟರ್ ತರಬೇತಿ ನೀಡಲಾಗುತ್ತೆ. ಮತ್ತು ಆರ್.ಪಿ.ಸಿ.ಯವರ ಜೊತೆ ಪ್ರಾಯೋಗಿಕವಾಗಿಯೂ ಪಾಠ ಕಲಿಯುತ್ತಾರೆ. ಶಾಲೆಯಿಂದ ಹೊರಹೋಗುವಷ್ಟರಲ್ಲಿ ಒಂದಷ್ಟು ಕೆಲಸವನ್ನೂ

ಮಾಡುತ್ತಾರೆ. ಈ ವರ್ಷದಿಂದ ಉಳಿದ ವಿಭಾಗಗಳಲ್ಲೂ ಇದನ್ನು ಜಾರಿಗೊಳಿಸಲಾಗುವುದು. ಮಾವೋವಾದಿಗಳು ಪ್ರಮುಖವಾಗಿ ಆದಿವಾಸಿಗಳೇ; ಭಾಷೆ, ಜೀವನಶೈಲಿ ಇಬ್ಬರಲ್ಲೂ ಬೇರೆಯಲ್ಲ. ಆಂಧ್ರದಿಂದ ಬಂದ ಕಾರ್ಯಕರ್ತರನ್ನೂ ಭೇಟಿ ಮಾಡಿದೆ. ಅವರದೂ ಇಲ್ಲಿನದೇ ಜೀವನ ಶೈಲಿ. ಹೊರಗಿನವರ್ಯಾರು? ಇಲ್ಲಿನವರ್ಯಾರು ಎಂಬುದನ್ನು ತಿಳಿಯುವುದೇ ನಮಗೆ ಕಷ್ಟವಾಗುತ್ತಿತ್ತು. ಎಲ್ಲರೂ ಗೊಂಡಿ ಭಾಷೆ ಉಪಯೋಗಿಸುತ್ತಿದ್ದರು. ನನಗೆ ಗೊಂಡಿ ಭಾಷೆ ತಿಳಿಯದು. ಹಿಂದಿಯ ಹೊರತಾಗಿ ಒಂದಷ್ಟು ಕಷ್ಟಪಟ್ಟರೆ ಪಂಜಾಬಿ ಮತ್ತು ಬೆಂಗಾಲಿಯನ್ನು ಅರ್ಥಮಾಡಿಕೊಳ್ಳಬಲ್ಲೆನಷ್ಟೇ. ಇಲ್ಲಿ ಸುತ್ತಮುತ್ತ ಗೊಂಡಿ ಭಾಷೆಯೇ ಹೆಚ್ಚು ಉಪಯೋಗಿಸಲ್ಪಡುತ್ತಿದ್ದದ್ದು. ಕೆಲವೊಂದು ಸಂಧರ್ಭದಲ್ಲಿ ತೆಲುಗು ಭಾಷೆ ಕೇಳಿ ಬರುತ್ತಿತ್ತು. ತೆಲುಗು ಅಥವಾ ಹಿಂದಿ ಇಲ್ಲಿ ಪರಕೀಯವೆನಿಸಿರಲಿಲಲ್ಲ.

ಬಹಳಷ್ಟು ಕಾಮ್ರೇಡ್‌ಗಳು ಇಲ್ಲಿನವರೇ ಆಗಿರುವುದು ಕೂಡ ಇವರ ಆತ್ಮವಿಶ್ವಾಸಕ್ಕೆ ಕಾರಣ. ಡಿ.ಕೆ.ಯಲ್ಲಿ ಪಕ್ಷದ ಕಾರ್ಯಕರ್ತರಿಂದ ಬಯಸುವ ಕಠಿಣ ಜೀವನ ಸಾಗಿಸುವುದು ಸುಲಭದ ಕೆಲಸವಲ್ಲ ಎಂದಿದ್ದರು ಜಿ.ಎಸ್.. ಮುರುಳಿ ಹೇಳಿದ್ದನ್ನು ನೆನಪಿಸಿಕೊಂಡೆ ' 1980ರಲ್ಲಿ ಡಿ.ಕೆ.ಯನ್ನು ಪ್ರವೇಶಿಸಿದ ಎರಡು ದಳಗಳಿಂದ ಇಬ್ಬರಷ್ಟೇ – ನಾನು ಮತ್ತು ಕೋಸಾ ಉಸೆಂದಿ – ಉಳಿದಿದ್ದೀವಿ. ಉಳಿದವರಲ್ಲಿ ಕೆಲವರ ಹತ್ಯೆಯಾಯಿತು, ಕೆಲವರು ಕೈಚೆಲ್ಲಿದರು. ಕೆಲವರಿಗೆ ಕಾಡಿನ ಜೀವನ ಒಗ್ಗಲಿಲ್ಲ.' ಹೊರಗಿನಿಂದ ಬರುವ ಕಾರ್ಯಕರ್ತರು ಕೆಲವು ತಿಂಗಳ ನಂತರ ಪೂರ್ಣ ಪ್ರಮಾಣದ ಪಕ್ಷದ ಕೆಲಸ ಬಿಟ್ಟು ಪಕ್ಷ ತೊರೆಯುವ ಬಗ್ಗೆ ಯೋಚಿಸುತ್ತಾರೆ ಎಂದರು ಜಿ.ಎಸ್. ಇದರ ಒಳಅರ್ಥ ಪಕ್ಷದ ಬೇರುಗಳು ಅಲ್ಲಿನ ಜನರ ನಡುವಿದೆಯೇ ಹೊರತು ಹೊರಗಲ್ಲ ಎಂಬುದೇ ಆಗಿತ್ತು.

ಇಷ್ಟೆಲ್ಲಾ ಸಾಧನೆಗಳಿರುವಾಗ ಪಕ್ಷ ಭೂಗತದಿಂದ ಹೊರಬಂದು ಕಾರ್ಯನಿರ್ವಹಿಸಲು ಇಚ್ಛಿಸುವುದಿಲ್ಲವಾ? ಪಕ್ಷದ ಕೆಲವು ಮುಖವಾಣಿ ಸಂಘಟನೆಗಳು ನೋಂದಣಿ ಮಾಡಿಸದೆ ಇರಬಹುದು. ಆದರೆ ಈ ಸಂಘಟನೆಗಳು ಹೋರಾಟದ ಮುಂಚೂಣಿಯಲ್ಲಿದ್ದು, ಅವಶ್ಯಕತೆ ಬಿದ್ದಾಗ ಮಾತುಕತೆಗೂ ಸಿದ್ಧವಾಗುತ್ತವೆ ಎಂದು ತಿಳಿಸಿದನು ಮುರುಳಿ. ಜಿ.ಎಸ್. ನಮಗೆ ಹೇಳಿದಂತೆ ಕಾನೂನು ಮತ್ತು ಆರ್ಥಿಕತೆಯ ಪ್ರಭಾವಕ್ಕೆ ಒಳಗಾಗಿ ಜನರು ಮತ್ತು ಅಧಿಕಾರ ವಶಪಡಿಸಿಕೊಳ್ಳುವಿಕೆಯನ್ನು ಮರೆಯಬಾರದು. ಸಂದರ್ಶನದಲ್ಲಿ ಹೇಗೆ ಕೆಲವು ಗುಂಪುಗಳು 'ಚಿಕ್ಕ ಪುಟ್ಟ ಪ್ರದೇಶಗಳನ್ನು ಮುಕ್ತಗೊಳಿಸುವ' ದಾರಿಯನ್ನು ತೊರೆದು, ಜನರನ್ನು ಸಶಸ್ತ್ರ ಕ್ರಾಂತಿಗೆ ತಯ್ಯಾರು ಮಾಡಬೇಕೆಂದು ಹೇಳುತ್ತಾ, ಪಾರ್ಲಿಮೆಂಟನ್ನು ಒಳಗಿನಿಂದಲೇ ಶುದ್ಧಿಗೊಳಿಸಬೇಕೆಂದು ಹೇಳಿ, ಭೂಗತ ಪಕ್ಷ ಮತ್ತು ಸಶಸ್ತ್ರ ದಳಗಳು ಇಲ್ಲದ ಕಾರಣ ಶುದ್ಧಪಡಿಸುವುಕೆಯಲ್ಲಿ ವಿಫಲರಾದರು ಎಂದು ವಿವರಿಸಿದರು. ನಂತರ ಹಿರಿಯ ಸದಸ್ಯರೊಬ್ಬರ ಜೊತೆ ಮಾತನಾಡುತ್ತಿದ್ದಾಗ ಬಹಿರಂಗ ಹೋರಾಟ ಕೂಡ ಮುಖ್ಯ ಆದರೆ ಕಾನೂನು ರೀತ್ಯ ಹೋರಾಡುವ ಉತ್ಸಾಹದಲ್ಲಿ ಹೋರಾಟ ಕಾವು ಕಳೆದುಕೊಳ್ಳಬಾರದೆಂದರು.